ಓಡಿಬಂದರು. "ಹಾಗೆ ಮಾಡುವುದು ಅಪರಾಧ ಮಗಳೇ. ಶ್ರೀರಂಗನ ಕೊರಳಿಗೆ ಕಟ್ಟಿದ ಮಾಲೆಗಳನ್ನು ಅವನಿಗೇ ತೊಡಿಸಬೇಕು. ಅದಲ್ಲವೇ ರೂಢಿ. ಅದಲ್ಲವೇ ಭಕ್ತಿ..."

"ನನ್ನ ಭಕ್ತಿ ಪ್ರೀತಿಯಾಗಿದೆ ಅಪ್ಪ."

ಅವಳ ದನಿ ವಿಚಿತ್ರವಾಗಿತ್ತು. ಅವಳ ಕಣ್ಣಿನ ಬೆಳಕು ಅವರನ್ನು ಚಂಚಲಗೊಳಿಸಿತು. "ಪ್ರೀತಿ ಬಲಿತು ಪ್ರೇಮವಾಗಿಯೂ ಅರಳಿತು" ಎಂದು ಮತ್ತೆ ಹೇಳಿದಳು. ಪೆರಿಯಾಳ್ವಾರ್ ವಿಹ್ವಲರಾಗಿ ಅವಳನ್ನು ತಲೆಯೆತ್ತಿ ನೋಡಿದರು.

"ಹೌದು, ಅಪ್ಪ, ನಾರಾಯಣ ನನ್ನನ್ನು ವಿವಾಹವಾದನು ಅಪ್ಪ."

"ಏನು ಹೇಳುತ್ತಿದ್ದೀಯಾ ಮಗಳೇ? ನನ್ನ ಗೊಂದಲ ನಿನಗೆ ಅರ್ಥವಾಗುವುದಿಲ್ಲವೇ?..." ಅವರ ಮಾತುಗಳು ತಡವರಿಸಿದವು. ಆಂಡಾಳ್ ಏನನ್ನೂ ಮಾತನಾಡಲಿಲ್ಲ. ತನ್ನ ಕುತ್ತಿಗೆಯಲ್ಲಿದ್ದ ಮಾಲೆಯನ್ನು ತಾನೇ ರಸಿಕತೆಯಿಂದ ನೋಡುತ್ತಾ ಕನಸಿನಲ್ಲಿ ಮುಳುಗಿಹೋದವಳಂತೆ ಪ್ರತಿಮೆಯಾಗಿ ನಿಂತಿದ್ದಳು. "ಆಂಡಾಳ್" ಪೆರಿಯಾಳ್ವಾರ್ ಹೆಚ್ಚುಕಡಿಮೆ ಅರಚುತ್ತಲೇ ಅವಳನ್ನು ಸಮೀಪಿಸಿದರು. "ನಿನ್ನನ್ನು ಬೆಳಸಿ ದೊಡ್ಡವಳಾಗಿಸಲು ನಾನು ಎಷ್ಟೆಲ್ಲಾ ಪಾಡುಪಟ್ಟಿರುವೆ ಮಗಳೇ, ಅವೆಲ್ಲಾ ನಿನಗೆ ಹೇಳಿದರೆ ತಿಳಿಯದು. ನೀನು ಬಾಯಿ ತೆರೆದು ಮಾತನಾಡಬೇಕು, ನಗಬೇಕು ಎಂದು ಎಷ್ಟು ದಿನ ಶ್ರದ್ಧೆಯಿಂದ ನಿನ್ನನ್ನು ಬೆಳೆಸಿದೆ ಗೊತ್ತೇ? ಇಷ್ಟೆಲ್ಲಾ ಮಾತನಾಡಿ ನನ್ನನ್ನು ಗಾಬರಿಪಡಿಸುತ್ತೀಯಲ್ಲಾ? ಆಂಡಾಳ್, ನೀನು ನನ್ನ ಪ್ರಾಣ ಅಮ್ಮ, ನನ್ನ ಪ್ರಾಣ ನೀನು."

ಅವರ ಗಾಬರಿಯನ್ನು ಅರಿಯದೇ ಕನಸಿನ ಲೋಕದಲ್ಲಿ ಅವಳ ಕಣ್ಣುಗಳು ತೇಲಾಡಿದವು. ಹೊಳೆವ ಕಣ್ಣುಗಳು. ಗುಂಗುರು ಕೂದಲು ಅಲೆದಾಡುವ ಹಣೆ. ಜೇನಿನ ಬಣ್ಣದಲ್ಲಿ ತುಂಬಿ ತುಳುಕುವ ಮುಖ. ಅವರ ಮಾತುಗಳು ಅವಳ ಕಿವಿಗೆ ಬೀಳಲಿಲ್ಲ. ಮೆಲ್ಲಗೆ ಸರಿದು ಅಂಗಳದಲ್ಲಿದ್ದ ಹಲಗೆಯ ಮೇಲೆ ಕುಳಿತರು. "ಏನು ಮಾತನಾಡುತ್ತಿದ್ದಾಳೆ? ಅವಳ ಕಣ್ಣಲ್ಲಿ ಯಾಕಿಷ್ಟು ಬೆಳಕು? ಅವಳ ದೇಹದಲ್ಲಿ ಯಾಕೆ ಅಷ್ಟೊಂದು ಪುಳಕ? ಶ್ರೀರಂಗನನ್ನು ಮುಖಾಮುಖಿ ನೋಡಿ ಪಳಗಿದಂತೆ ಏನು ಈ ಮಾತು? ಅಯ್ಯೋ ಏನು ಅರ್ಥವಾಗುತ್ತಿಲ್ಲವಲ್ಲ" ಎಂದು ಕಣ್ಣು ಮುಚ್ಚಿಕೊಂಡರು. ತಪ್ಪಾಗಿ ಒಂದು ಮಾತು ಹೇಳಿ ಮಗಳನ್ನು ಗಾಯಗೊಳಿಸಬಾರದು ಎಂದು ಹಲ್ಲು ಕಚ್ಚಿಕೊಂಡರು. ತಲೆಯ ನರಗಳು ಉಬ್ಬಿ ಸಿಡಿಯುವಂತಾದವು. ತೋಟದಲ್ಲಿ ಹೂ ಗಿಡಗಳ ಪಕ್ಕ ಅವಳನ್ನು ಮಗುವಾಗಿ ನೋಡಿ ತೆಗೆದುಕೊಂಡ ಕ್ಷಣದಿಂದ ಯಾವುದೋ ಕಣ್ಣಿನ ದೃಷ್ಟಿ ತಾಗಿದೆ ಅಂದುಕೊಂಡರು. "ನೀಲಿ ಹೂ ಬಣ್ಣದ ಕೃಷ್ಣನ ಕರಿ ಕೇಶವ ಸರಿಮಾಡಿ ಜಡೆ ಹೆಣೆಯಲು ಬಾ ಬಾ ಕಾಗೆಯೇ... " ಎಂದು ಸದಾ ಕಾಲವೂ ತುಂಬು ಮಾತುಗಳಲ್ಲಿ ತೇಲಾಡುವ ಪರಿಸರದಲ್ಲಿ ಅವಳನ್ನು ಬೆಳೆಸಿದ್ದು ತಪ್ಪೋ ಎಂದು ತೋರಿತು. ಆ ಅತಿರೇಕದ ಗಡಿಯನ್ನು ಅವಳ ಮನಸ್ಸು ಮುಟ್ಟಿದೆ. "ನಾರಾಯಣ, ಯಾಕೆ ಹೀಗಾಯಿತಪ್ಪಾ?" ಎಂದು ಮನದಲ್ಲೇ ಗೋಳಾಡಿದರು. ಸಾಮಾನ್ಯ ಮಗಳಾಗಿ, ಊರಲ್ಲಿ ಸಮೃದ್ಧಿಯಿಂದ ಬದುಕುವುದನ್ನು ನೋಡುವ ಭಾಗ್ಯವನ್ನು ಕೊಡಬಾರದೇ ಎಂದು ಮರುಗಿದರು. ಅವರ ಕಣ್ಣುಗಳು ತುಂಬಿ ಬಂದವು.

"ಅಪ್ಪಾ" ಆಂಡಾಳ್ ಅವರ ಬಳಿ ಹೋಗಿ ನಿಂತು ಅವರ ಭುಜವನ್ನು ಮುಟ್ಟಿದಳು.

"ಏನಪ್ಪಾ?" ಎಂದು ವಾತ್ಸಲ್ಯದಿಂದ ಪಕ್ಕದಲ್ಲಿ ಕುಳಿತಳು. ಅವಳ ಕೊರಳಿನಲ್ಲಿ ಇನ್ನೂ ಆ ಮಾಲೆ ಇತ್ತು.

"ಯಾಕೆ ಈ ಗಾಬರಿ?" ಅವಳು ಕನಿಕರದಿಂದ ಕೇಳಿದಳು. ಆ ಗದ್ಗದ ದನಿಗೆ ಅವರ ಮನಸ್ಸು ಸಡಿಲವಾಯಿತು.

"ನಿನ್ನ ಮಾತು ಗೊಂದಲವನ್ನುಂಟು ಮಾಡುತ್ತಿದೆ ಮಗಳೇ" ತಡವರಿಸುವ ಧ್ವನಿಯಲ್ಲಿ ಹೇಳಿದರು ಪೆರಿಯಾಳ್ವಾರ್.

"ಆ ಬಿಂದಿಗೆಯ ನಡುವೆ ನಿಂತ ನನ್ನರಸನೇ ಬಂದು ಹೂಮುಡಿದುಕೋ' ಎಂದು ಹಾಡಿದವರು ನೀವೇ ಅಲ್ಲವೇ ತಂದೆ."

"ಹೌದು ಆಂಡಾಳ್, ಆದರೆ ಅದಕ್ಕೇನಂತೆ ಈಗ?"

"ಕೊಳದ ತಿಳಿಯಾದ ನೀರಲ್ಲಿ ಅರಳಿದ ನೈದಿಲೆಯ ಮುಡಿದುಕೊಳ್ಳಲು ಬಾರೋ' ಎಂದು ಹಾಡಿದವರೂ ನೀವಲ್ಲವೇ ತಂದೆ?"

"ಹೌದಮ್ಮಾ, ಅದನ್ನೆಲ್ಲಾ ಯಾಕೆ ಈಗ ನೆನಪು ಮಾಡುತ್ತಿದ್ದೀಯ?"

"ಹೀಗೆಲ್ಲಾ ಹೇಳಿ ನೀವಲ್ಲವೇ ನನ್ನನ್ನು